ಶ್ರೀ ಎ. ಎಸ್. ನಾಡಗೌಡ. (ಕಾರ್ಮಿಕ ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ (ಮೇಲಿನ 'ಅ' ಮತ್ತು 'ಆ' ಉತ್ತರದಿಂದ)

ಚಾಮರಾಜನಗರ ತಾಲ್ಲೂಕು ಪುಟ್ಟನಪುರ ಗ್ರಾಮದಲ್ಲಿರುವ ಸರ್ವೆ ನಂ. ೬, ೭, ೮ ಮತ್ತು ೯ ರಲ್ಲಿರುವ ಸರ್ಕಾರಿ ದಾರಿಯನ್ನು ಅತಿಕ್ರಮಿಸಿರುವ ಬಗ್ಗೆ.

೨೭೦ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಾಮರಾಜನಗರ ತಾಲ್ಲೂಕು ಪುಟ್ಟನಪುರ ಗ್ರಾಮದಲ್ಲಿರುವ ಸರ್ವೆ ನಂ. ೬,೭,೮ ಮತ್ತು ೯ರಲ್ಲಿರುವ ಸರ್ಕಾರಿ ಕಾಲುದಾರಿಯನ್ನು ಖಾಸಗಿ ವ್ಯಕ್ತಿ ಅತಿಕ್ರಮಣ ಮಾಡಿರುವುದೆಲ್ಲಿದೆ, ಸರ್ಕಾರದ ಮೇಲೆಯೇ ನ್ಯಾಯಾಲಯದಲ್ಲಿ ದೂರು ಕೊಟ್ಟಿರುವುದು ನಿಜವಲ್ಲವೇ ?

ಆ) ಈ ಮೊಕದ್ದಮೆಯಲ್ಲಿ ಸರ್ಕಾರದ ಜೊತೆಗೆ ಮೇಲ್ಕಂಡ ಗ್ರಾಮದ ಪಕ್ಕದ ಹಳ್ಳಿಯ ಜನರನ್ನು ಸಹ ಪ್ರತಿವಾದಿಗಳನ್ನಾಗಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಜನರನ್ನು ನ್ಯಾಯಾಲಯದ ಮೊಕದ್ದಮೆಯಿಂದ ವಾಪಸ್ ಪಡೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಹೌದು.

ಆ) ಬಂದಿದೆ,

ಇ) ಸರ್ಕಾರದ ಪರವಾಗಿ ವಕಾಲತ್ತು ಹಾಕಿ ವಾದಿಸಲು ಸರ್ಕಾರಿ ವಕೀಲರನ್ನು ಕೋರಿದೆ ಉಳಿದ ಜನರನ್ನು ಮೊಕದ್ದಮೆಯಿಂದ ವಾಪಸ್ ಪಡೆಯುವ ಬಗ್ಗೆ ಪರಿಶೀಲಿಸಲಾಗುವುದು.

೧. ಎಸ್. ಐ. ಆಸ್ಪತ್ರೆಗಳು ಹಾಗೂ ಡಿಸ್ಪೆನ್ಸರಿಗಳು

೨೭೧ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳ ಸಂಖ್ಯೆ ಮತ್ತು ಡಿಸ್ಪೆನ್ಸರಿಗಳೆಷ್ಟು ?

ಆ) ಅವುಗಳು ಎಲ್ಲೆಲ್ಲಿವೆ ?

ಇ) ರಾಜ್ಯದಲ್ಲಿರುವ ಇ. ಎಸ್. ಐ. ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಕೊರತೆಯನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಉ) ರಾಜ್ಯದಲ್ಲಿ ಇನ್ನೂ ಹೆಚ್ಚಿಗೆ ಇ.ಎಸ್.ಐ. ಆಸ್ಪತ್ರೆಗಳನ್ನು ಹೆಚ್ಚಿಸುವಂತೆ ಯಾರಿಂದ ಎಷ್ಟಾದರೂ ಸರ್ಕಾರಕ್ಕೆ ಮನವಿಗಳು ಬಂದಿವೆಯೆ ?

ಊ) ಹಾಗಿದ್ದಲ್ಲಿ ಸದರಿ ಮನವಿಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು).—

ಅ) ಆಸ್ಪತ್ರೆಗಳು—೭ ಆ) ಚಿಕಿತ್ಸಾಲಯಗಳು—೧೧೩ ಇ) ಆಯುರ್ವೇದ ಚಿಕಿತ್ಸಾಲಯ—೨ ಈ) ಅಂಶಕಾಲಿಕ ಚಿಕಿತ್ಸಾಲಯಗಳು—೧೮ ಉ) ವೈದ್ಯಕೀಯ ಸೌಲಭ್ಯ ಹೊಂದಿರುವ ಚಿಕಿತ್ಸಾಲಯಗಳು—೧೦.

ಅ) ಪಟ್ಟಿ ಲಗತ್ತಿಸಿದೆ.